<u>ದಿವಾಣಿ ನ್ಯಾಯಾಧೀಶರು ವ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ</u>

<u>ನ್ಯಾಯಾಲಯ, ಶಿಗ್ಗಾಂವ</u>

<u>ಸಿಸಿ ಸಂಖ್ಯೆಃ **632/2022**</u>

ಪಿರ್ಯಾದಿಃ ಸರಕಾರ (ಬಂಕಾಪುರ ಪೊಲೀಸ್ ಠಾಣೆ)

<u>ವಿರುದ್ಧ</u>

ಆರೋಪಿ : ಬಾಲಾಜಿ ಸಿಂಗ್ ರಾಮು ಸಿಂಗ್ ಕಿತ್ತೂರು
ವಯಾಃ 42 ವರ್ಷ, ಉದ್ಯೋಗಃ ಕಾವಲುಗಾರ,
ಸಾಃ ಬಮ್ಮಿಗಟ್ಟಿ, ಗ್ರಾಮ, ಕಲಗಟಗಿ ತಾಲ್ಲೂಕು,
ಧಾವರಡ ಜಿಲ್ಲೆ

<u>ಆಪಾದನೆ</u>

ಮೊದಲನೇಯದಾಗಿ, ಬಂಕಾಪುರ ಪೋಲಿಸ್ ಠಾಣಾ ಹದ್ದಿನ ಬಂಕಾಪುರ - ಮುಂಡಗೋಡ ರಸ್ತೆಯ ಮೇಲೆ ದಿನಾಂಕಃ 23.11.2021 ರಂದು ಬೆಳಗ್ಗೆ 11.30 ಗಂಟೆ ಸುಮಾರಿಗೆ ಆರೋಪಿತರಾದ ನೀವು ಮೋಟಾರ್ ಸೈಕಲ್ ನಂ.ಕೆಎ-25-ಹೆಚ್‌ಡಿ-4260 ನೇದ್ದನ್ನು ಮುಂಡಗೋಡ ಕಡೆಯಿಂದ ಬಂಕಾಪುರ ಕಡೆಗೆ ಜೋರಾಗಿ ವ ನಿರ್ಲಕ್ಷತನದಿಂದ ಮಾನವೀಯ ಪ್ರಾಣಕ್ಕೆ ಅಪಾಯವಾಗುವಂತೆ ನಡೆಸಿಕೊಂಡು ಬಂದು ಬಸವನಕಟ್ಟಿ ಗ್ರಾಮಂದ ಬಸ್ ಸ್ಟಾಪ್ ಸಮೀಪ ರಸ್ತೆಯ ಮೇಲಿನ ರೋಡ್ ಹಂಪ್ಸ್ ಮೇಲೆ ಗಾಡಿಯನ್ನು ಜೋರಾಗಿ ನಡೆಸಿದ್ದರಿಂದ ಹಿಂಬದ ಸವಾರಳಾದ ಮೃತ ಮೀನಾಕ್ಷಿಬಾಯಿ ಕೋಂ ಪರಶುರಾಮಸಿಂಗ ಕಿತ್ತೂರು ಇವರು ಪುಟಿದು ಕೆಳಗೆ ಬಿದ್ದಿದ್ದು, ಮೋಟಾರು ಸೈಕಲ್‌ನ್ನು ಅತಿ ಜೋರಾಗಿ ವ ನಿರ್ಲಕ್ಷದಿಂದ ಮಾನವಿಯ ಪ್ರಾಣಕ್ಕೆ ಅಪಾಯವಾಗುವಂತೆ ನಡೆಸಿಕೊಂಡು ಬಂದು ಅಪಘಾತಪಡಿಸಿದ್ದು, ಮನವ ಜೀವಕ್ಕೆ ಹಾನಿ ಉಂಟುಮಾಡುವ ರೀತಿಯಲ್ಲಿ ಚಾಲನೆ ಮಾಡಿದ್ದು, ಆದ್ದರಿಂದ ನೀವು ಭಾರತೀಯ ದಂಡ ಸಂಹಿತೆ ಕಲಂ.279ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಎಂದು ಆರೋಪಿಸಲಾಗಿರುತ್ತದೆ.

ಎರಡನೆಯದಾಗಿ, ಮೇಲ್ಕಂಡ ದಿನ, ವೇಳೆ ಹಾಗೂ ಸ್ಥಳದಲ್ಲಿ ಆರೋಪಿಯಾದ ನೀವು ಸದರಿ ಸದರಿ ದ್ವಿಚಕ್ರ ವಾಹನವನ್ನು ಅತಿ ವೇಗ ಮತ್ತು ಅಜಾಗರುಕತೆಯಿಂದ ನಡೆಸಿಕೊಂಡು ಬಂದು ಅಪಘಾತಪಡಿಸಿದ್ದರಿಂದ ಸದರಿ ಮೃತ ಮೀನಾಕ್ಷಿಬಾಯಿ ಕೋಂ ಪರಶುರಾಮಸಿಂಗ ಕಿತ್ತೂರು ರವರಿಗೆ ತಲೆಗೆ ಬಲವಾದ ಒಳಪೆಟ್ಟು ಆಗಿದ್ದು ನಂತರ ಕಿಮ್ಸ್ ಆಸ್ಪತ್ರೆ ಹುಬ್ಬಳ್ಳಿಯಲ್ಲಿ ವೈದ್ಯಕೀಯ ಚಿಕಿತ್ಸೆಗಾಗಿ ದಾಖಲು ಮಾಡಿದ್ದು ಚಿಕಿತ್ಸೆ ಫಲಕಾರಿಯಾಗದೇ ಅಂದೇ ದಿಃ23.11.2021 ರಂದು ಸಾಯಂಕಾಲ 5.50 ಗಂಟೆಗೆ ಮರಣಹೊಂದುವಂತೆ ಮಾಡಿದ್ದು,

ಆದ್ದರಿಂದ ನೀವು ಭಾರತೀಯ ದಂಡ ಸಂಹಿತೆ ಕಲಂ.304(ಎ) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಎಂದು ಆರೋಪಿಸಲಾಗಿರುತ್ತದೆ.

ಮೂರನೇಯದಾಗಿ, ಮೇಲ್ಕಂಡ ದಿನ, ವೇಳೆ ಹಾಗೂ ಸ್ಥಳದಲ್ಲಿ ಆರೋಪಿಯಾದ ನೀವು ಅಧಿಕೃತ ಚಾಲನಾ ಪರವಾನಗಿ ಹೊಂದಿಲ್ಲದಿದ್ದರು ಸದರಿ ಮೋಟಾರು ಸೈಕಲ್ ನಂ. ಕೆಎ-25-ಹೆಚ್‌ಡಿ-4260 ವಾಹನವನ್ನು ಚಲಾಯಿಸಿದ್ದು, ಆ ಕಾರಣ ನೀವು ಭಾರತೀಯ ಮೋಟಾರು ವಾಹನ ಕಾಯ್ದೆ ಕಲಂ 3 ಸಹಕಲಂ 181 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಎಂದು ಆರೋಪಿಸಲಾಗಿರುತ್ತದೆ.

ಸ್ಥಳಃ ಶಿಗ್ಗಾಂವ
ದಿನಾಂಕಃ 06.04.2023

**ದಿವಾಣಿ ನ್ಯಾಯಾಧೀಶರು**
**ವ ಜೆಎಂಎಫ್‌ಸಿ., ಶಿಗ್ಗಾಂವ.**

ಆರೋಪಿತರ ಸಹಿಃ

Accused No. A3, A4, A7, A10, A12 are present and submits that they want to plead guilty. Hence plea of accused No. A3, A4, A7, A10, A12 are recorded and explained to the Accused No. A3, A4, A7, A10, A12 in the language know to them. Accused No. A3, A4, A7, A10, A12 plead the guilty which is voluntary one. Same is accepted. Hence, I pass the following

**ORDER**

Acting U/sec.252 of Cr.P.C. Accused No. A3, A4, A7, A10, A12 convicted for the offences punishable U/Sec.87 of K.P Act Sentenced to pay fine at the following rate.

1. Rs............each for the offence punishable U/Sec. 87 of K.P Act.

(Rupees ...........................only) in default to pay fine he shall under go S.I. for.......days.

**Civil Judge & JMFC.,**
**Haveri.**